RNU AIR DHARWAD

# NOVEMBER 10, 2024

## AKASHAVANI - DHARWAD

## PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು:

<><><>

- ರಾಜ್ಯದಲ್ಲಿ 35 ಲಕ್ಷ ಎಂ.ಎಸ್.ಎಂ.ಇ. ನವೋದ್ಯಮಗಳಿದ್ದು, 1 ಕೋಟಿ 65 ಲಕ್ಷ ಜನರಿಗೆ ಉದ್ಯೋಗ ಒದಗಿಸಿವೆ – ನಿರ್ಮಲಾ ಸೀತಾರಾಮನ್.
- 'ನಿರ್ಮಲ ತುಂಗಾ ಭದ್ರಾ ಅಭಿಯಾನ': ಶಿವಮೊಗ್ಗದಲ್ಲಿ ಇಂದು, ಜಲ ಜಾಗೃತಿ ಪಾದಯಾತ್ರೆ.
- ಧಾರವಾಡದ ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆಯಲ್ಲಿ, ಇಂದಿನಿಂದ ವೃತ್ತಿ ಮಾರ್ಗದರ್ಶನ, ಕಾರ್ಯಾಗಾರ.
- ರಾಜ್ಯದ ಅಲೆಮಾರಿ ಮತ್ತು ಅರೆ ಅಲೆಮಾರಿ ನಿಗಮದಿಂದ, ಮಹತ್ವದ ಯೋಜನೆಗಳು ಜಾರಿಗೆ – ಜಿ.ಪಲ್ಲವಿ.

<><><>

ಈಗ ವಾರ್ತೆಗಳ ವಿವರ

<><><>

ಕರ್ನಾಟಕ 35 ಲಕ್ಷ ಎಂ.ಎಸ್.ಎಂ.ಇ. ನವೋದ್ಯಮಗಳನ್ನು ಹೊಂದಿದ್ದು, 1 ಕೋಟಿ 65 ಲಕ್ಷ ಜನರಿಗೆ ಉದ್ಯೋಗ ನೀಡಿದೆ. ಭಾರತದ ಆರ್ಥಿಕ ಸುದೃಢತೆಗೆ ಕರ್ನಾಟಕ ಮಹತ್ವದ ಕೊಡುಗೆ ನೀಡುತ್ತಿದೆ ಎಂದು ಕೇಂದ್ರ ಹಣಕಾಸು ಖಾತೆ ಸಚಿವರಾದ ನಿರ್ಮಲಾ ಸೀತಾರಾಮನ ಬೆಂಗಳೂರಿನಲ್ಲಿ ಹೇಳಿದ್ದಾರೆ.

ಸಚಿವರು, ಹುಬ್ಬಳ್ಳಿಯ ಉತ್ತರ ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದಲ್ಲಿ ಆಯೋಜಿಸಿದ್ದ, 'ರಾಷ್ಟ್ರೀಯ ಎಂ.ಎಸ್.ಎಂ.ಇ. ಕ್ಲಸ್ಟರ್ ಔಟರೀಚ್' ಕಾರ್ಯಕ್ರಮವನ್ನು, ವಿಡಿಯೋ ಸಂವಾದದ ಮೂಲಕ ಉದ್ಘಾಟಿಸಿದರು.

<><><>

ಧಾರವಾಡ ಜಿಲ್ಲಾ ಅಗ್ರಣಿ ಬ್ಯಾಂಕ್ ವ್ಯವಸ್ಥಾಪಕ ಪ್ರಭುದೇವ ಮಾತನಾಡಿ, ಮೈಕ್ರೋ, ಸ್ಮಾಲ್ ಆಂಡ್ ಮೀಡಿಯಂ ಎಂಟರ್‌ಪ್ರೈಸಸ್, ಯುವಜನತೆ ಉದ್ಯಮಗಳನ್ನು ಸ್ಥಾಪಿಸಿ, ಉದ್ಯೋಗಗಳನ್ನು ಸೃಷ್ಟಿಸಿ, ಆರ್ಥಿಕವಾಗಿ ಸ್ವಾವಲಂಬಿಯಾಗಲು, ಅನುಕೂಲ ಕಲ್ಪಿಸುತ್ತದೆ. ಒಟ್ಟು 143 ಫಲಾನುಭವಿಗಳಿಗೆ ವಿವಿಧ ಬ್ಯಾಂಕುಗಳಿಂದ 6 ಕೋಟಿ ರೂಪಾಯಿ ಸಾಲ ಮಂಜೂರು ಮಾಡಲಾಗಿದೆ ಎಂದರು.

<><><>

ಎಂ.ಎಸ್.ಎಂ.ಇ. ಯೋಜನೆಯ ಫಲಾನುಭವಿ, ಹುಬ್ಬಳ್ಳಿಯ ಧನರಾಜ ಲಕ್ಕಣ್ಣವರ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಫಲಾನುಭವಿ ಧನರಾಜ ಲಕ್ಕಣ್ಣವರ ಧ್ವನಿ 47 ಸೆಕೆಂದುಗಳು

<><><>

'ನಿರ್ಮಲ ತುಂಗಾ ಭದ್ರಾ ಅಭಿಯಾನ'ದ ಹಿನ್ನೆಲೆ, ಜಲ ಜಾಗೃತಿ ಪಾದಯಾತ್ರೆ ಹಾಗೂ ಶಿವಮೊಗ್ಗ ನಗರದಲ್ಲಿ, ತುಂಗಾ ಆರತಿ ಸೇರಿದಂತೆ, ಇಂದು ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು, ಶಾಸಕ ಎಸ್.ಎನ್.ಚೆನ್ನಬಸಪ್ಪ ತಿಳಿಸಿದ್ದಾರೆ. ಶಿವಮೊಗ್ಗದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತುಂಗಾ ಹಾಗೂ ಭದ್ರಾ ನದಿ ಪಾತ್ರದ ಜಲ ಮಾಲಿನ್ಯದ ಬಗ್ಗೆ ಹಾಗೂ ನದಿಯ ಸ್ವಚ್ಛತೆ ಕುರಿತು ಜಾಗೃತಿ ಮೂಡಿಸಲು, ನಿರ್ಮಲ ತುಂಗಾ ಭದ್ರಾ ಅಭಿಯಾನ ನಡೆಸಲಾಗುತ್ತಿದೆ ಎಂದರು. ಇಂದು ಬೆಳಗ್ಗೆ 8.30ಕ್ಕೆ, ಶಿವಮೊಗ್ಗದ ಅಂಬೇಡ್ಕರ್ ಭವನದಲ್ಲಿ, ಪ್ರಬುದ್ಧರ ಸಭೆ ನಡೆಯಲಿದೆ. ಕೋರ್ಪಲಯ್ಯ ಛತ್ರದ ಬಳಿ, ಇಂದು ಸಂಜೆ 6.30 ಕ್ಕೆ ತುಂಗಾ ಆರತಿ ಜರುಗಲಿದೆ. ನಾಳೆ ಬೆಳಗ್ಗೆ 8 ಗಂಟೆಗೆ, ಕುವೆಂಪು ರಂಗಮಂದಿರದಲ್ಲಿ, ಯುವಜಾಗ್ರತಿ ಕಾರ್ಯಕ್ರಮ ಆಯೋಜಿತವಾಗಿದೆ.

<><><>

ಹಿರಿಯ ಪರಿಸರ ಅರ್ಥಶಾಸ್ತ್ರಿ ಪ್ರೊಫೆಸರ್ ಬಿ.ಎಂ. ಕುಮಾರಸ್ವಾಮಿ, ನಟ ಪ್ರಕಾಶ ಬೆಳವಾಡಿ, ರಾಷ್ಟ್ರೀಯ ಸ್ವಾಭಿಮಾನಿ ಆಂದೋಲನದ ಸಂಚಾಲಕ, ಹೊಸ ದಿಲ್ಲಿಯ ಬಸವರಾಜ ಪಾಟೀಲ ವೀರಾಪುರ ಸಂಪನ್ಮೂಲ ವ್ಯಕ್ತಿಗಳಾಗಿ, ಭಾಗವಹಿಸಲಿದ್ದಾರೆ.

<><><>

ವಿಜಯಪುರ ಜಿಲ್ಲೆಯ, ಬಬಲೇಶ್ವರ ಮತ್ತು ತಿಕೋಟಾ ಪಟ್ಟಣಗಳ ಪ್ರತಿ ವ್ಯಕ್ತಿಗೆ, ದಿನಂಪ್ರತಿ ಪ್ರಸ್ತುತ 55 ಲೀಟರ್ ನೀರಿನ ಪೂರೈಕೆಯನ್ನು ಹೆಚ್ಚಿಸಿ, 135 ಲೀಟರ್ ನೀರು ಪೂರೈಸಲು, ಹೊಸ ಯೋಜನೆ ರೂಪಿಸಲಾಗಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ತಿಳಿಸಿದ್ದಾರೆ. ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಸಚಿವರು ಈ ವಿಷಯ ಪ್ರಕಟಿಸಿದ್ದಾರೆ. ಮುದ್ದೇಬಿಹಾಳ, ಸಿಂದಗಿ, ಬಸವನಬಾಗೇವಾಡಿ ಪಟ್ಟಣಗಳ ನೀರು ಪೂರೈಕೆ ಜಾಲಕ್ಕಾಗಿ, ಹೊಸ ಟೆಂಡರ್ ಪ್ರಕ್ರಿಯೆ ಆರಂಭಿಸಲು, ಸೂಚನೆ ನೀಡಿದ್ದಾಗಿ ಅವರು ಮಾಹಿತಿ ನೀಡಿದ್ದಾರೆ. ವಿಜಯಪುರ ನಗರಕ್ಕೆ ಆಲಮಟ್ಟಿ ಹಿನ್ನೀರಿನಿಂದ, ಕುಡಿಯುವ ನೀರು ಪೂರೈಸುವ, 10 ದಶಾಂಶ 8 ಕಿಲೋ ಮೀಟರ್ ಉದ್ದದ ಕೊಳವೆ ಮಾರ್ಗ ಶಿಥಿಲವಾಗಿದೆ. 52 ಕೋಟಿ ರೂಪಾಯಿ ವೆಚ್ಚದಲ್ಲಿ, ಹೊಸದಾಗಿ ಪೈಪ್‌ಲೈನ್ ಅಳವಡಿಸಲಾಗುವುದು ಎಂದು, ಸಚಿವರು ಹೇಳಿದ್ದಾರೆ.

<><><>

2025ರ ಜನವರಿ 13 ರಿಂದ, ಪ್ರಯಾಗ್‌ರಾಜ್‌ನಲ್ಲಿ ಕುಂಭಮೇಳ ಆರಂಭವಾಗಲಿದೆ. ಈ ಬಾರಿ ಅಲ್ಲಿ ಕನ್ನಡದ ಕಂಪು ಪಸರಿಸಲಿದೆ. ಪ್ರಯಾಗ್ ರಾಜ್ ರೈಲ್ವೆ ನಿಲ್ದಾಣದಲ್ಲಿ ಕನ್ನಡ, ಹಿಂದಿ, ಇಂಗ್ಲಿ ್ ಭಾ ೆ ಸೇರಿದಂತೆ, 12 ಭಾ ೆಗಳಲ್ಲಿ ಪ್ರಕಟಣೆ ನೀಡಲಾಗುತ್ತದೆ ಎಂದು, ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ತಿಳಿಸಿದ್ದಾರೆ.

ಕುಂಭಮೇಳಕ್ಕೆ ದೇಶಾದ್ಯಂತ ವಿವಿಧ ಸ್ಥಳಗಳಿಂದ, ಭಕ್ತರು ರೈಲುಗಳ ಮೂಲಕ ಆಗಮಿಸುತ್ತಾರೆ. ಈ ವೇಳೆ, ಭಿನ್ನ ಪ್ರಾದೇಶಿಕ ಭಾ ೆ ಮಾತನಾಡುವವರಿಗೆ ತೊಂದರೆಯಾಗಬಾರದು ಎನ್ನುವ ದೃಷ್ಟಿಯಿಂದ, ಈ ವ್ಯವಸ್ಥೆ ಕೈಗೊಳ್ಳಲಾಗಿದೆ ಎಂದಿದ್ದಾರೆ. ದೇಶದ ವಿಶಾಲ ಭಾ ಾ ವೈವಿಧ್ಯತೆಯ ಜೊತೆಗೂಡಿ, ಭಾರತೀಯ ರೈಲ್ವೆ ಸಮರ್ಥವಾಗಿ ಸಾಗುತ್ತಿದೆ ಎಂದು, ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ, ಸಚಿವರು ಪ್ರಕಟಿಸಿದ್ದಾರೆ.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಧಾರವಾಡ ಬಳಿಯ ಸತ್ತೂರಿನ, ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ– ಟ್ರಿಪಲ್ ಐ.ಟಿ.ಯಲ್ಲಿ, ಇಂದಿನಿಂದ ವೃತ್ತಿ ಮಾರ್ಗದರ್ಶನಕ್ಕೆ ಸಂಬಂಧಿಸಿದ ಸಮಾವೇಶ ನಡೆಯಲಿದೆ ಎಂದು, ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆಯ ನಿರ್ದೇಶಕ ಪ್ರೊಫೆಸರ್ ಎಸ್.ಆರ್. ಮಹದೇವ ಪ್ರಸನ್ನ ತಿಳಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಇಂದು ಬೆಳಗ್ಗೆ 10 ಗಂಟೆಗೆ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಅವರು ಉದ್ಘಾಟಿಸಲಿದ್ದು, ವಿಧಾನಸಭೆ ವಿಪಕ್ಷ ಉಪ ನಾಯಕ ಅರವಿಂದ ಬೆಲ್ಲದ, ಅತಿಥಿಗಳಾಗಿ ಪಾಲ್ಗೊಳ್ಳುವರು ಎಂದರು. ಹೈದರಾಬಾದ್, ಮುಂಬೈ, ಪುಣೆ ಹಾಗೂ ಬೆಂಗಳೂರಿನಿಂದ, ಅನೇಕ ಕೈಗಾರಿಕೆಗಳ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥರು, ತಂತ್ರಜ್ಞಾನ ಕ್ಷೇತ್ರದ ಪರಿಣತರು ಭಾಗವಹಿಸುವರು. ಮಾಹಿತಿ ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ, ದತ್ತಾಂಶ ವಿಜ್ಞಾನ ಮೊದಲಾದ ಕ್ಷೇತ್ರಗಳಲ್ಲಿನ ಕೌಶಲಭರಿತ ಮಾನವ ಸಂಪನ್ಮೂಲದ ಬಗ್ಗೆ, ಮಾಹಿತಿ ನೀಡುವರು ಎಂದು, ಹೇಳಿದರು.

<><><>

ಅಲೆಮಾರಿ ಹಾಗೂ ಅರೆ ಅಲೆಮಾರಿ ಸಮುದಾಯಗಳಲ್ಲಿ, 46 ಪಂಗಡಗಳಿದ್ದು, ಆರ್ಥಿಕ ಚಟುವಟಿಕೆ ಕೈಗೊಂಡು, ಸ್ಥಿರವಾಗಿ ಜೀವನೋಪಾಯ ಮತ್ತು ನೆಲೆ ಕಂಡುಕೊಳ್ಳಲು, ರಾಜ್ಯ ಅಲೆಮಾರಿ ಮತ್ತು ಅರೆ ಅಲೆಮಾರಿ ನಿಗಮದಿಂದ, ಹಲವು ಯೋಜನೆಗಳನ್ನು ಜಾರಿಗೊಳಿಸಲಾಗಿದೆ ಎಂದು, ಅಭಿವೃದ್ಧಿ ನಿಗಮದ ಅಧ್ಯಕ್ಷೆ ಜಿ.ಪಲ್ಲವಿ ತಿಳಿಸಿದ್ದಾರೆ. ರಾಯಚೂರು ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಅವರು, ನಿಗಮದ ಯೋಜನೆಗಳ ಪ್ರಗತಿ ಪರಿಶೀಲಿಸಿ, ಮಾತನಾಡಿದರು. ನಿಗಮ ಅಲೆಮಾರಿಗಳ ಅಭಿವೃದ್ಧಿಗೆ ಪೂರಕವಾಗಿ ಯೋಜಿಸಲು, ಪ್ರತಿ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು, ಅವರ ಸ್ಥಿತಿಗತಿ, ಸಮಸ್ಯೆಗಳನ್ನು ಪರಿಶೀಲಿಸಿ, ಸಮುದಾಯದ ಮಕ್ಕಳ ಭವಿಷ್ಯವನ್ನು ಉಜ್ವಲಗೊಳಿಸಲು ಮಾರ್ಗದರ್ಶನ ಮಾಡಲಾಗುತ್ತಿದೆ ಎಂದರು.

<><><>

ಉತ್ತರಕನ್ನಡ ಜಿಲ್ಲೆ ಹಳಿಯಾಳ, ಕುಸ್ತಿಗೆ, ಗರಡಿ ಮನೆಗಳಿಗೆ ಪ್ರಸಿದ್ಧ. ಈ ಭಾಗದ ಅನೇಕರು, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದ ಕುಸ್ತಿಯಲ್ಲಿ, ರಾಜ್ಯವನ್ನು ಪ್ರತಿನಿಧಿಸಿದ್ದಾರೆ. ಹಳಿಯಾಳ ತಾಲೂಕಿನ, ಜಟ್ಕಾ ಹೊಸೂರಿನ, ಸಿದ್ದಿ ಬುಡಕಟ್ಟು ಸಮುದಾಯದ ಕುಸ್ತಿಪಟು ಮನಿ ೨ ಸಿದ್ದಿ, ಜೋಯಿಡಾ ತಾಲೂಕಿನ ರಾಮನಗರದ ಬಾಪೂಜಿ ಕಾಲೇಜಿನ ವಿದ್ಯಾರ್ಥಿ. ರಾಷ್ಟ್ರ ಮಟ್ಟದಲ್ಲಿ ಬೆಳ್ಳಿ ಪದಕ ವಿಜೇತೆ. ಇತ್ತೀಚೆಗೆ ಉತ್ತರ ಪ್ರದೇಶದ ಮೀರತ್‌ನಲ್ಲಿ ನಡೆದ, 68ನೇ ರಾಷ್ಟ್ರೀಯ ಅಂತರ್ ಶಾಲಾ ಕುಸ್ತಿ ಚಾಂಪಿಯನ್ ಶಿಪ್‌ನಲ್ಲಿ, 72 ಕಿಲೋ ವಿಭಾಗದಲ್ಲಿ ಕಂಚಿನ ಪದಕ ಪಡೆದು, ರಾಜ್ಯಕ್ಕೆ ಕೀರ್ತಿ ತಂದಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಮನಿಷಾ ಸಿದ್ದಿ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಮನಿಷಾ ಸಿದ್ದಿ ಧ್ವನಿ 21 ಸೆಕೆಂದುಗಳು

<><><>

ಇಂದು ವಿಶ್ವ ವಿಜ್ಞಾನ ದಿನ. 'ಶಾಂತಿ ಮತ್ತು ಅಭಿವೃದ್ಧಿಗಾಗಿ ವಿಜ್ಞಾನ' ಎಂಬ ಧ್ಯೇಯದೊಂದಿಗೆ, ಸಮಾಜದ ಪ್ರಯೋಜನಕ್ಕಾಗಿ ವಿಜ್ಞಾನದ ಜವಾಬ್ದಾರಿಯುತ ಬಳಕೆಯನ್ನು ಒತ್ತಿ ಹೇಳಲು, ಈ ದಿನಾಚರಣೆಯನ್ನು ಯೂನೆಸ್ಕೋ ಸಾಮಾನ್ಯ ಸಭೆ ಮೀಸಲಿರಿಸಿದೆ. ವಿಜ್ಞಾನದ ಮಹತ್ವದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು ಮತ್ತು ವಿಜ್ಞಾನ ಹಾಗೂ ಸಮಾಜದ ನಡುವಿನ ಅಂತರವನ್ನು ಕಡಿಮೆಗೊಳಿಸುವ, ಗುರಿ ಹೊಂದಿದೆ.

<><><>

ಹಿರಿಯ ವೈದ್ಯ ಸಾಹಿತಿ ಹಾಗೂ ನಾ.ಸು. ಹರ್ಡೀಕರ ಅವರ ಶಿಷ್ಯರಾಗಿದ್ದ, ಡಾಕ್ಟರ್ ವಾಮನಮೂರ್ತಿ ಕುಲಕರ್ಣಿ, ಗದಗನಲ್ಲಿ ನಿಧನರಾದರು. ಅವರಿಗೆ 88 ವರ್ಷ ವಯಸ್ಸಾಗಿತ್ತು. ಬೆಳಗಾವಿ ಜಿಲ್ಲೆ ಘಟಪ್ರಭಾದ ಆರೋಗ್ಯಧಾಮದ ಆಡಳಿತ ಮಂಡಳಿ ಸದಸ್ಯರಾಗಿದ್ದ, ಡಾಕ್ಟರ್ ವಾಮನಮೂರ್ತಿ ಅವರು ಮೂಲತಃ ಬಾಗಲಕೋಟೆ ಜಿಲ್ಲೆಯವರು. ಪಾರ್ಥಿವ ಶರೀರದ ಅಂತ್ಯಕ್ರಿಯೆ ಇಂದು ಬೆಳಗ್ಗೆ 8 ಗಂಟೆಗೆ, ಗದಗನಲ್ಲಿ ನಡೆಯಲಿದೆ. ಭಾರತ ಸೇವಾದಳದ ಪದಾಧಿಕಾರಿಗಳು, ಆರೋಗ್ಯಧಾಮದ ವಿಶ್ವಸ್ಥರು, ಸಂತಾಪ ಸೂಚಿಸಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಸೋಮವಾರ, 11ನೇ ತಾರೀಖು ಸಂಜೆ 5.30ಕ್ಕೆ, ರಾಜ್ಯದ ಮೂರೂ ವಿಧಾನಸಭಾ ಕ್ಷೇತ್ರಗಳ ಉಪ ಚುನಾಣೆಯ ಬಹಿರಂಗ ಪ್ರಚಾರ ಅಂತ್ಯವಾಗಲಿದೆ.

<><><>

ಹಾವೇರಿ ಜಿಲ್ಲೆ, ಹಾನಗಲ್ ತಾಲೂಕಿನಲ್ಲಿ, ಆತ್ಮಹತ್ಯೆ ಮಾಡಿಕೊಂಡ ರೈತನ ಮನೆಗೆ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಭೇಟಿ ನೀಡಿ, ಕುಟುಂಬಕ್ಕೆ ಸಾಂತ್ವನ ಹೇಳಿದರು.

<><><>

ವಿಶ್ವ ವಿಖ್ಯಾತ ಮೇಲುಕೋಟೆ ಚೆಲುವ ನಾರಾಯಣ ಸ್ವಾಮಿ ದೇವಸ್ಥಾನದಲ್ಲಿ, ಈ ತಿಂಗಳ 18ರ ವರೆಗೆ, ರಾಜಮುಡಿ ಉತ್ಸವ ನಡೆಯಲಿದೆ. ಮಂಡ್ಯ ಜಿಲ್ಲಾಧಿಕಾರಿ ಕುಮಾರ, ರಾಜಮುಡಿಗೆ ಪೂಜೆ ಸಲ್ಲಿಸಿ, ಖಜಾನೆಯಿಂದ ಬೀಳ್ಕೊಟ್ಟರು.

<><><>

ಚಿಕ್ಕಮಗಳೂರು ಜಿಲ್ಲೆಯಲ್ಲಿ, ದತ್ತಮಾಲೆ ಅಭಿಯಾನ ನಡೆಯುತ್ತಿದೆ. ರಾಜ್ಯದ ವಿವಿಧೆಡೆಯಿಂದ ಭಕ್ತರು ದತ್ತಪೀಠಕ್ಕೆ ಆಗಮಿಸಿದ್ದು, ಇಂದು ಶೋಭಾ ಯಾತ್ರೆ ಹಾಗೂ ಧಾರ್ಮಿಕ ಸಭೆ ಜರುಗಲಿದೆ.

<><><>

ಸರ್ಕಾರಿ ಕಚೇರಿಗಳಲ್ಲಿ ಮತ್ತು ಆವರಣಗಳಲ್ಲಿ ತಂಬಾಕು ಮತ್ತು ತಂಬಾಕು ಉತ್ಪನ್ನಗಳ ಸೇವನೆಯನ್ನು, ಸಂಪೂರ್ಣ ನಿ ೀಧಿಸಲಾಗಿದೆ ಎಂದು, ಆರೋಗ್ಯ ಖಾತೆ ಸಚಿವ ದಿನೇಶ ಗುಂಡೂರಾವ ತಿಳಿಸಿದ್ದಾರೆ.

<><><>

ಉತ್ತರಕನ್ನಡ ಜಿಲ್ಲೆ, ಜೋಯಿಡಾ ತಾಲೂಕು, ಅಖೆತಿಮೆಡಾ ಗ್ರಾಮದಲ್ಲಿ, 175 ಲಕ್ಷ ರೂಪಾಯಿ ವೆಚ್ಚದಲ್ಲಿ ನೂತನವಾಗಿ ನಿರ್ಮಿತ, ಬ್ರಿಜ್ ಬಾಂದಾರವನ್ನು, ಶಾಸಕ ಆರ್.ವಿ. ದೇಶಪಾಂಡೆ ಲೋಕಾರ್ಪಣೆಗೊಳಿಸಿದರು.

<><><>

ಚಿಕ್ಕಬಳ್ಳಾಪುರ ತಾಲೂಕಿನ ಪಂಚವಟಿಯಲ್ಲಿ, ಲಾಯನ್ಸ್ ಕ್ಲಬ್ ವತಿಯಿಂದ, ಸಸಿಗಳನ್ನು ನೆಡುವ ಆಂದೋಲನಕ್ಕೆ, ಕನ್ನಡ ರಾಜ್ಯೋತ್ಸವ ನಿಮಿತ್ತ ಚಾಲನೆ ನೀಡಲಾಗಿದೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ರಾಜ್ಯದಲ್ಲಿ 35 ಲಕ್ಷ ಎಂ.ಎಸ್.ಎಂ.ಇ. ನವೋದ್ಯಮಗಳಿದ್ದು, 1 ಕೋಟಿ 65 ಲಕ್ಷ ಜನರಿಗೆ ಉದ್ಯೋಗ ಒದಗಿಸಿವೆ – ನಿರ್ಮಲಾ ಸೀತಾರಾಮನ್.**
- **'ನಿರ್ಮಲ ತುಂಗಾ ಭದ್ರಾ ಅಭಿಯಾನ'; ಶಿವಮೊಗ್ಗದಲ್ಲಿ ಇಂದು, ಜಲ ಜಾಗೃತಿ ಪಾದಯಾತ್ರೆ.**
- **ಧಾರವಾಡದ ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆಯಲ್ಲಿ, ಇಂದಿನಿಂದ ವೃತ್ತಿ ಮಾರ್ಗದರ್ಶನ, ಕಾರ್ಯಾಗಾರ.**
- **ರಾಜ್ಯದ ಅಲೆಮಾರಿ ಮತ್ತು ಅರೆ ಅಲೆಮಾರಿ ನಿಗಮದಿಂದ, ಮಹತ್ವದ ಯೋಜನೆಗಳು ಜಾರಿ – ಜಿ.ಪಲ್ಲವಿ.**

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>

**ಹರ್ಷ**